ಟಿ.ಎಂ. ವಿಜಯ ಭಾಸ್ಕರ್, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
**T.M. VIJAY BHASKAR, I.A.S.**
**Additional Chief Secretary to Government**

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**Karnataka Government Secretariat**
**Rural Development & Panchayat Raj Department**

ಅ.ಸ.ಪತ್ರ ಸಂ.ಗ್ರಾಅಪ 33 ಗ್ರಾನೀಸ(5) 14 ದಿನಾಂಕ:17.9.2014

ಮಾನ್ಯರೇ,

1. 2013–14ರಲ್ಲಿ 1000–ನೀರು ಶುದ್ಧೀಕರಣ ಘಟಕಗಳು ಅಳವಡಿಸಿರುವ ಸಂಸ್ಥೆಗಳಿಗೆ ಬಿಲ್ ಪಾವತಿಸುವ ಮುನ್ನ ಅನುಸರಿಸಬೇಕಾದ ವಿಧಿವಿಧಾನಗಳ (ಶುದ್ಧೀಕರಣ ಘಟಕದ ಸಾಮರ್ಥ್ಯ, ಮಾದರಿ, ತಾಂತ್ರಿಕ ಮಾನದಂಡ ಹಾಗೂ ToR ನಿಬಂಧನೆಗಳ ಅನುಪಾಲನೆ) ನ್ನು ಕುರಿತಂತೆ ಅರೆ ಸರ್ಕಾರಿ ಪತ್ರ ಸಮ ಸಂಖ್ಯೆ: ದಿ:11.4.2014ರಲ್ಲಿ ವಿಷದಪಡಿಸಲಾಗಿದೆ.

2. ಅದರಂತೆ, **2011–12, 2012–13 ಮತ್ತು 2013–14ರ ಸಾಲಿನಲ್ಲಿ ಅನುಮೋದಿತ ಸಂಸ್ಥೆಗಳ ಮುಖೇನ ಅಳವಡಿಸಿರುವ ನೀರು ಶುದ್ಧೀಕರಣ ಘಟಕಗಳಿಗೆ ಅಗತ್ಯವಿರುವ ನೀರಿನ ಸಂಪರ್ಕ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಿ ಕೂಡಲೇ ಅವುಗಳು ಸಮರ್ಪಕವಾಗಿ ಚಾಲನೆಯಾಗುವಂತೆ ನೋಡಿಕೊಳ್ಳಬೇಕು.** ಈ ಕುರಿತಂತೆ ವಿದ್ಯುತ್ ಸಂಪರ್ಕ ಕಲ್ಪಿಸಲು ESCOMಗಳಿಗೂ ಸಹ ದಿ:11.7.2014ರಲ್ಲಿ ಪತ್ರ ವಿಳಾಸಿಸಿದೆ.

3. ಸದರಿ ಶುದ್ಧೀಕರಣ ಘಟಕದ **ಮುಂಭಾಗದಲ್ಲಿ ದೂರುಗಳನ್ನು ದಾಖಲಿಸಲು ಆ ಸಂಸ್ಥೆ ನೀಡಿರುವ ಟೋಲ್ ಫ್ರೀ ಸಂಖ್ಯೆ / ದೂರವಾಣಿ ಸಂಖ್ಯೆ ಮತ್ತು ಸರ್ಕಾರದಿಂದ ಗೊತ್ತುಪಡಿಸಿರುವ ಟೋಲ್ ಫ್ರೀ ಸಂಖ್ಯೆ18004258666** ಗಳನ್ನು ಪ್ರಚುರಪಡಿಸಬೇಕು.

4. ಇದು ಪಾರದರ್ಶಕವಾಗಿರುವಂತೆ ಮತ್ತು ಸ್ಥಾಪಿತ ನೀರು ಶುದ್ಧೀಕರಣ ಘಟಕಗಳು ನೀರಿನ ಗುಣಮಟ್ಟ ಭಾದಿತ ಜನವಸತಿಗಳಲ್ಲಿ ಸದ್ಬಳಕೆಯಾಗುವಂತೆ ನೋಡಿಕೊಳ್ಳಲು ತಾವು ವಿಶೇಷ ಗಮನ ಹರಿಸುವ ಜವಾಬ್ದಾರಿ ಹೊಂದಿರುತ್ತೀರಿ. ಇದನ್ನು ಮನಗಂಡು ನಿರೀಕ್ಷಿತ ಅನುಪಾಲನೆ ಮೂಲಕ ಸ್ಪಂದಿಸಲು ಕೋರುತ್ತೇನೆ.

ಶುಭಾಶಯಗಳೊಂದಿಗೆ,

ತಮ್ಮ ವಿಶ್ವಾಸಿ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಪ್ರತಿ:

1. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕೆ.ಹೆಚ್.ಬಿ ಕಾಂಪ್ಲೆಕ್ಸ್,ಕಾವೇರಿ ಭವನ, ಬೆಂಗಳೂರು. – ಸಂಬಂಧಿಸಿದ ಏಜೆನ್ಸಿಗಳಿಗೆ ಅಗತ್ಯ ಸೂಚನೆ ನೀಡಿ ಬರೆದಿರುವುದನ್ನು (ಪಾವತಿ) ಖಾತ್ರಿಪಡಿಸಿಕೊಳ್ಳುವುದು.
3. ರಾಜ್ಯದ ಎಲ್ಲಾ ಕಾರ್ಯಪಾಲಕ ಇಂಜಿನಿಯರ್ (38)ಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

ಟಿ.ಎಂ. ವಿಜಯ ಭಾಸ್ಕರ್
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ

ಬಹುಮಹಡಿ ಕಟ್ಟಡ, 3ನೇ ಮಹಡಿ, 3ನೇ ಗೇಟ್, ಬೆಂಗಳೂರು-560 001. M.S. Building, 3rd Floor, Gate No. 3, Bangalore-560 001.
Tel. : 080-2235 3929 / 2203 2446 Fax : 080-2235 3927
e-mail : prsrdpr@karnataka.gov.in / principalsecretaryrdpr@gmail.com Website : www.rdpr.kar.nic.in